1 ನೇ **ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಸಾಗರ**
**ಸಿಸಿ ನಂಬರು** 842-2022

**ಸಿ.ಡಬ್ಲ್ಯು -6, ಪಿ.ಡಬ್ಲ್ಯು -7**

**ಸಾಕ್ಷಿದಾರರ ಹೆಸರು** : ಗೀತಾ
ಗಂಡನ **ಹೆಸರು** : ಕೃಷ್ಣ
**ವಯಸ್ಸು** : 40 ವರ್ಷ
**ಉದ್ಯೋಗ** : ಗೃಹಿಣಿ
**ವಾಸ** : ಹಲಸಿನಕೊಪ್ಪ ಗ್ರಾಮ, ಸೊರಬ ತಾಲ್ಲೂಕು.

**ಪ್ರಮಾಣೀಕರಿಸಿದ** ದಿನಾಂಕ :15.06.2026.

**ಮುಖ್ಯ ವಿಚಾರಣೆ : ಸಸಅ ರಿಂದ**

1. ಚಾಸ 1 ನನ್ನ ಅಕ್ಕ. ಚಾಸ 4 ನನ್ನ ತಾಯಿ. ಚಾಸ 5 ನನ್ನ ತಮ್ಮ. ಆರೋಪಿತರ ಪರಿಚಯವಿದೆ. ಸುಮಾರು 4 ವರ್ಷಗಳ ಹಿಂದೆ ಮಂಕಳಲೆ ಗ್ರಾಮದಲ್ಲಿ ನನ್ನ ತಾಯಿಗೆ ಸೇರಿದ ತೋಟದಲ್ಲಿ ನಾನು, ಚಾಸ 1, 4 ಮತ್ತು 5 ರವರು ಕಳೆ ಕೀಳಲು ಹೋಗಿದ್ದಾಗ ಆರೋಪಿತರು ಬಂದು ಚಾಸ 1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಕೆನ್ನೆಗೆ ಹೊಡೆದು ತಲೆ ಕೂದಲನ್ನು ಕಿತ್ತು ಕೆಳಗೆ ಬೀಳಿಸಿದರು. ಆಗ ನಾವು ಹೋಗಿ ಜಗಳವನ್ನು ಬಿಡಿಸಿದೆವು. ಆರೋಪಿತರು ಚಾಸ 1 ರವರ ಬಟ್ಟೆಯನ್ನು ಹಿಡಿದು ಎಳೆದಾಡಿದರು. ಆರೋಪಿತರು ನನ್ನ ಅಕ್ಕ ಚಾಸ 1 ರವರಿಗೆ ಅವಾಚ್ಯವಾಗಿ ಬೈದು ಇಲ್ಲಿಗೆ ಬಂದರೆ ನಿನ್ನನ್ನು ಕೊಲ್ಲುತ್ತೇನೆ ಎಂದು ಬೆದರಿಕೆ ಹಾಕಿದರು. ನಂತರ ನಾವು ಚಾಸ 1 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಸೇರಿಸಿದೆವು. ಆ ದಿನ ಜಗಳ ಮಾಡಿದ ವ್ಯಕ್ತಿಗಳು ಈ ದಿನ ನ್ಯಾಯಾಲಯದ ಮುಂದೆ ಆರೋಪಿತರ ಸ್ಥಾನದಲ್ಲಿರುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯು ದಂಡ ಪ್ರಕ್ರಿಯಾ ಸಂಹಿತೆ ಕಲಂ 161 ರ ಹೇಳಿಕೆಗೆ ಭಾಗಶಃ ವ್ಯತಿರಿಕ್ತವಾಗಿ ಸಾಕ್ಷಿ ನುಡಿದಿದ್ದರಿಂದ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ. ರವರು ಕೋರಿಕೊಂಡಿರುತ್ತಾರೆ. ಕಡತಗಳನ್ನು ಪರಿಶೀಲಿಸಿ ಆಲಿಸಿ ಅನುಮತಿಯನ್ನು ನೀಡಲಾಯಿತು.)

ಪಾಟೀ ಸವಾಲುಃ- ಸ.ಸ.ಅ. ರವರಿಂದಃ-

1. ದಿಃ09.05.2022 ರಂದು ಮಂಕಳಲೆ ಗ್ರಾಮದ ಸರ್ವೇ ಸಂಖ್ಯೆ 64 ರಲ್ಲಿ ಚಾಸ 1, ನಾನು ಮತ್ತು ಚಾಸ 4 ಹಾಗೂ 5 ರವರು ಬೇಲಿ ಕಟ್ಟುವ ಕೆಲಸವನ್ನು ಮಾಡುತ್ತಿದ್ದಾಗ ಸಂಜೆ 4.30 ರ ಸಮಯದಲ್ಲಿ ಆರೋಪಿತರು ಬಂದು ಗಲಾಟೆ ಮಾಡಿರುತ್ತಾರೆ ಎಂದರೆ ಸರಿ. ಚಾಸ 1 ರವರನ್ನು ಆರೋಪಿತರು ಅಡ್ಡಗಟ್ಟಿ ತಡೆದರು ಎಂದರೆ ಸರಿ.

ಪಾಟೀ ಸವಾಲು: ಆರೋಪಿತರ ಪರ ಶ್ರೀ ಆರ್.ಹೆಚ್.ಬಿ. ವಕೀಲರಿಂದ:-

1. ನಾವು ತೋಟದ ಕೆಲಸಕ್ಕೆಂದು ಸಂಜೆ 4 ಗಂಟೆಗೆ ಹೋಗಿದ್ದೆವು. ಆ ದಿನ ನಾವು ಸಂಜೆ 6 ಗಂಟೆಯವರೆಗೂ ಕಳೆ ಕೀಳುತ್ತಿದ್ದೆವು. ಆ ದಿನ ನಾವು 4 ಜನ ಕೆಲಸಕ್ಕೆ ಹೋಗಿದ್ದೆವು. ನಾವು 4 ಜನರು ತೋಟದ ಕೆಲಸವನ್ನೇ ಮಾಡುತ್ತಿದ್ದೆವು. ನಾವು ಆಸ್ಪತ್ರೆಗೆ 4 ಜನರು ಆಟೋದಲ್ಲಿ ಹೋದೆವು. ಆ ದಿನ ನಾವು ನೇರವಾಗಿ ಆಸ್ಪತ್ರೆಗೆ ಹೋದೆವು. ನಾವು ಆಸ್ಪತ್ರೆಗೆ ಹೋದಾಗ ಸಂಜೆ 6 ಗಂಟೆ ಆಗಿತ್ತು. ವೈದ್ಯರು ಬರುವ ಸಮಯದಲ್ಲಿ ನಾನು ಇರಲಿಲ್ಲ, ಮನೆಗೆ ಬಂದಿದ್ದೆ.

2. ಆರೋಪಿತರು ಮತ್ತು ನಮ್ಮ ನಡುವೆ ಸಿವಿಲ್ ವ್ಯಾಜ್ಯ ಇರುತ್ತದೆ ಎಂದರೆ ಸರಿ. ಆರೋಪಿತರು ಮತ್ತು ನಮಗೆ ಮೊದಲಿನಿಂದಲೂ ಜಮೀನಿನ ಕುರಿತು ಮನಸ್ತಾಪ ಇದೆ ಎಂದರೆ ಸರಿ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಾನು ಒಂದು ಬಾರಿ ಠಾಣೆಗೆ ಹೋಗಿರುತ್ತೇನೆ. ದಿ:10.05.2022 ರಂದು ಪೊಲೀಸರ ಮುಂದೆ ನೀಡಿರುವ ಹೇಳಿಕೆಯಲ್ಲಿ ನನ್ನ ತಾಯಿಯ ಜಮೀನಿನ ಪಕ್ಕದಲ್ಲಿ 1 ನೇ ಆರೋಪಿಯ ಸಾಗುವಳಿ ಜಮೀನು ಇರುತ್ತದೆ ಎಂದು ನಾನು ತಿಳಿಸಿರುವುದಿಲ್ಲ. ಪೊಲೀಸರು ಸುಳ್ಳು ಬರೆದುಕೊಂಡಿರುತ್ತಾರೆ. ನಮ್ಮ ಅಡಿಕೆ ತೋಟದಲ್ಲಿಯೇ ಈ ಘಟನೆ ನಡೆದಿರುತ್ತದೆ. ಸೊಪ್ಪಿನ ಬೆಟ್ಟದ ವಿಸ್ತೀರ್ಣ ನನಗೆ ಗೊತ್ತಿಲ್ಲ. ನನ್ನ ತಾಯಿ ಸಾಗುವಳಿ ಮಾಡುತ್ತಿರುವ ಜಮೀನಿಗೆ ಖಾತೆ ಪಹಣಿ ಇರುತ್ತದೆ. ಪೊಲೀಸರು ಬಂದ ದಿನ ನಾನು ಘಟನಾ ಸ್ಥಳಕ್ಕೆ ಹೋಗಿದ್ದೆ.

3. ಪೊಲೀಸರು ಘಟನಾ ಸ್ಥಳಕ್ಕೆ ಬಂದಾಗ ಸಂಜೆ 4.30 ಆಗಿತ್ತು. ನಮ್ಮ ಮನೆಯಿಂದ ಘಟನಾ ಸ್ಥಳ 1 ಕಿ ಮೀ ಅಂತರದಲ್ಲಿರುತ್ತದೆ. ಮನೆಯಿಂದ ಘಟನಾ ಸ್ಥಳಕ್ಕೆ ಹೋಗಲು 15 ನಿಮಿಷ ಬೇಕು. ನಾನು ಮಂಕಳಲೆ ಗ್ರಾಮದ ಖಾಯಂ ವಾಸಿ ಅಲ್ಲ ಎಂದರೆ ಸರಿ. ನನ್ನ ಅಕ್ಕ ಚಾಸ 1 ಸೊರಬ ತಾಲ್ಲೂಕಿನ ಮಳಲಗದ್ದೆಯವರು ಎಂದರೆ ಸರಿ. ಚಾಸ 1 ರವರಿಗೆ ಮದುವೆಯಾಗಿ 25 ವರ್ಷಗಳಾಗಿರುತ್ತವೆ. ನನಗೆ ಮದುವೆಯಾಗಿ 15 ವರ್ಷಗಳಾಗಿರುತ್ತದೆ. ಚಾಸ 5 ರೈತಸಂಘದ ಮುಖಂಡ ಎಂದರೆ ಸರಿ. ರೈತ ಸಂಘದ ಪ್ರತಿಭಟನೆಗೆ ಚಾಸ 5 ಹೋಗುವ ಬಗ್ಗೆ ನನಗೆ ಗೊತ್ತಿಲ್ಲ. ನಮ್ಮ ವಿರುದ್ಧ 1 ನೇ ಆರೋಪಿಯ ತಾಯಿ ಪ್ರಕರಣವನ್ನು ದಾಖಲಿಸಿರುತ್ತಾರೆ ಎಂದರೆ ಸರಿ. ನಾವು ಯಾವುದೇ ಜಮೀನಿನ ಕೆಲಸಕ್ಕೆ ಹೋಗಿಲ್ಲ ಮತ್ತು ಜಗಳವಾಗಿಲ್ಲ ಎಂದರೆ ಸರಿಯಲ್ಲ. ಚಾಸ 1 ರವರಿಗೆ ಯಾವುದೇ ಗಾಯಗಳು ಆಗದೇ ಇದ್ದರೂ ಪ್ರಕರಣ ದಾಖಲಿಸುವ ಉದ್ದೇಶದಿಂದ ಗಾಯವಾಗಿದೆ ಎಂದು ಆಸ್ಪತ್ರೆಗೆ ಚಾಸ 1 ರವರನ್ನು ದಾಖಲಿಸಲಾಗಿರುತ್ತದೆ ಎಂದರೆ ಸರಿಯಲ್ಲ.

ಮಂಕಳಲೆ ಗ್ರಾಮದ ಸರ್ವೇ ಸಂಖ್ಯೆ 64 ರಲ್ಲಿ 1 ನೇ ಆರೋಪಿಯು ನೆಟ್ಟಿರುವ ಅಡಿಕೆ ಗಿಡಗಳನ್ನು ಕಿತ್ತು ಆತನನ್ನು ಹೊರಹಾಕಲು ಪ್ರಯತ್ನಿಸಿರುತ್ತೇವೆ ಎಂದರೆ ಸರಿಯಲ್ಲ. ನಾನು ನನ್ನ ಸಾಕ್ಷ್ಯ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ವಿಷಯಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ. ಯಾವುದೇ ಜಗಳವಾಗದಿದ್ದರೂ ಸಿವಿಲ್ ದಾವೆಗೆ ಸಹಾಯವಾಗಲಿ ಎಂದು ಸುಳ್ಳು ಪ್ರಕರಣವನ್ನು ದಾಖಲಿಸಲಾಗಿರುತ್ತದೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)**
**ಓದಿ ಹೇಳಿ ಕೇಳಿ ಸರಿ ಇದೆ**

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಸಾಗರ.